ಉದ್ಯೋಗಸ್ಥ ಮಹಿಳಾ ವಸತಿ ಗೃಹದ ಬಗ್ಗೆ

813 - ಡಾ. ಜೀ. ಪರಮೇಶ್ವರ (ಮಧುಗಿರಿ) : ಮಾನ್ಯ ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1) 1986ರಿಂದ ಎಷ್ಟು ಉದ್ಯೋಗಸ್ಥ ಮಹಿಳಾ ವಸತಿ ಗೃಹಕ್ಕಾಗಿ ಸರ್ಕಾರ ಅನುಮತಿ ನೀಡಿದೆ?

2) 1986ರಿಂದ ಎಷ್ಟು ಅರ್ಜಿಗಳು ಬಂದಿರುತ್ತವೆ ಮತ್ತು ಯಾರಿಂದ?

3) ಕೇಂದ್ರ ಸರ್ಕಾರದಿಂದ ಈ ಸಂಬಂಧವಾಗಿ ಎಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ?

4) ಪ್ರಸ್ತಾವನೆಗಳನ್ನು ಕಳುಹಿಸದೆ ಇರುವುದಕ್ಕೆ ಕೇಂದ್ರ ಸರ್ಕಾರದಿಂದ ಪತ್ರವೇನಾದರೂ ಬಂದಿರುತ್ತವೆಯೇ?

ಶ್ರೀ ಬಿ. ಶಿವಣ್ಣ (ಕಾನೂನು ಮತ್ತು ಸಮಾಜ ಕಲ್ಯಾಣ ಮಂತ್ರಿಗಳು):

1) 14.

2) 39 ಅರ್ಜಿಗಳು ಬಂದಿರುತ್ತವೆ.

(ಪಟ್ಟಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ)

3) ರೂ. 1,26,33,106-00

4) ನಾಲ್ಕು ಸಂಸ್ಥೆಗಳಿಗೆ ಸಂಬಂಧಿಸಿದಂತೆ ಪ್ರಸ್ತಾವನೆಯನ್ನು ಕಳುಹಿಸುವಂತೆ ಭಾರತ ಸರ್ಕಾರದಿಂದ ಪತ್ರ ಬಂದಿದೆ.

1986ರಿಂದೀಚೆಗೆ ಉದ್ಯೋಗಸ್ಥ ಮಹಿಳೆಯರ ವಸತಿ ಗೃಹ ಮಂಜೂರಾತಿಗಾಗಿ ಬಂದ ಅರ್ಜಿಗಳು

1. ಕಿತ್ತೂರು ರಾಣಿ ಚನ್ನಮ್ಮ ಎಜುಕೇಷನ್ ಸಂಸ್ಥೆ, ಕಿತ್ತೂರು.
2. ಹುಲಿಕೋಟಿ ಕೋ-ಆಪರೇಟೀವ್ ಸೊಸೈಟಿ, ಗದಗ
3. ರೂರಲ್ ಟೆಕ್ನಿಕಲ್ ಎಜುಕೇಷನ್ ಸೊಸೈಟಿ, ಹುಲಿಕೋಟಿ
4. ವನಿತಾ ಸಮಾಜ, ದಾವಣಗೆರೆ.
5. ಕರ್ನಾಟಕ ಗ್ರಾಮೀಣ ಉಮೆನ್ ಅಂಡ್ ಹ್ಯಾಂಡಿಕ್ಯಾಪ್ ಡೆವಲಪ್‌ಮೆಂಟ್ ಸೊಸೈಟಿ, ಪೀಣ್ಯ, ಬೆಂಗಳೂರು.
6. ಮಲೆನಾಡು ತಾಂತ್ರಿಕ ಶಿಕ್ಷಣ ಸಂಸ್ಥೆ, ಹಾಸನ.
7. ಡಾ. ಅಂಬೇಡ್ಕರ್ ಮಿಷನ್, ಶಿವಮೊಗ್ಗ.
8. ಗೋಕಾಕ್ ವಿದ್ಯಾವರ್ಧಕ ಸಂಸ್ಥೆ, ಗೋಕಾಕ್.
9. ಕಸ್ತೂರಿಬಾ ಸದನ, ಚಿಕ್ಕಮಗಳೂರು.
10. ಅಕಾಡಮಿ ಫಾರ್ ಜನರಲ್ ಎಜುಕೇಷನ್, ಮಣಿಪಾಲ್.
11. ಬಸವ ಸಮಿತಿ, ಬೆಂಗಳೂರು.
12. ಮಹಿಳಾ ಮಂಡಳಿ, ಬೀದರ್.
13. ಕ್ರಾಪ್ಟನ್ ಕ್ಲಬ್, ಬಳ್ಳಾರಿ.
14. ವಿಶಾಲ ಎಜುಕೇಷನ್ ಸಂಸ್ಥೆ, ಬೆಂಗಳೂರು.
15. ಮುರುಗರಾಜೇಂದ್ರ ವಿದ್ಯಾಪೀಠ, ಚಿತ್ರದುರ್ಗ.

16. ಡಾ. ಅಂಬೇಡ್ಕರ್ ಶಿಕ್ಷಣ ಟ್ರಸ್ಟ್, ಧಾರವಾಡ.
17. ಹೆಚ್.ಎಂ.ಎಸ್. ಎಜುಕೇಷನ್ ಸಂಸ್ಥೆ, ತುಮಕೂರು
18. ನೀಲಕಂಠೇಶ್ವರ ವಿದ್ಯಾವರ್ಧಕ ಸಂಸ್ಥೆ, ಬೈಲಹೊಂಗಲ.
19. ರೇಣುಕಾ ಎಲ್ಲಮ್ಮ ಎಜುಕೇಷನ್ ಸಂಸ್ಥೆ, ಸವದತ್ತಿ
20. ಸಿದ್ಧರ್ಥ ಎಜುಕೇಷನ್ ಸಂಸ್ಥೆ, ತುಮಕೂರು.
21. ಮಹಿಳಾ ಸಮಾಜ, ತುಮಕೂರು.
22. ಜಿಲ್ಲಾಧಿಕಾರಿಗಳು, ಗುಲ್ಬರ್ಗಾ.
23. ತರಳಬಾಳು ಜಗದ್ಗುರು ವಿದ್ಯಾಸಂಸ್ಥೆ, ಸಿರಿಗೆರೆ, ಚಿತ್ರದುರ್ಗ ಜಿಲ್ಲೆ.
24. ಆಲ್ ಇಂಡಿಯಾ ವುಮೆನ್ಸ್ ಕಾನ್‌ಫರೆನ್ಸ್, ಮೈಸೂರು ಝೋನ್, ಮೈಸೂರು.
25. ಚಾಸನ್ ಎಜುಕೇಷನ್ ಸೊಸೈಟಿ, ಬೆಂಗಳೂರು.
26. ನಿಟ್ಟೂರು ಎಜುಕೇಷನ್ ಸೊಸೈಟಿ, . ಬೀದರ್.
27. ಏಯ್ಡ್ ದಿ ವೀಕರ್ ಟ್ರಸ್ಟ್, ಧಾರವಾಡ.
28. ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯಾನಿವರ್ಸಿಟಿ, ಬೆಂಗಳೂರು.
29. ಭವಾನಿ ವರ್ಕಿಂಗ್ ವುಮನ್ಸ್ ಟ್ರಸ್ಟ್, ಬೆಂಗಳೂರು.
30. ಅಕ್ಷಯ ಮಹಿಳಾ ಮಂಡಳಿ, ಕಾರವಾರ.
31. ವೀಮ್ಸ್ ಎಜುಕೇಷನ್ ಸೊಸೈಟಿ, ಗುಲ್ಬರ್ಗಾ.
32. ಮೊಹಿದ್ದೀನ್ ಎಜುಕೇಷನ್ ಟ್ರಸ್ಟ್, ತುಂಬೆ.
33. ಇಂಡಿಯನ್ ಕೌನ್ಸಿಲ್ ಫಾರ್ ಸೋಷಿಯಲ್ ವೆಲ್‌ಫೇರ್, ಬೆಂಗಳೂರು.
34. ವನಿತಾ ಮೈತ್ರಿ ಸಂಸ್ಥೆ, ಕೋಲಾರ.
35. ಮಹಿಳಾ ಸಮಾಜ, ಅಜ್ಜರ್ ಕಾದ್, ಉಡುಪಿ.
36. ಗೌತಮ ಶಿಕ್ಷಣ ಸಂಸ್ಥೆ, ಚನ್ನರಾಯಪಟ್ಟಣ.
37. ಕೊಡಗು ಜಿಲ್ಲಾ ಪರಿಷತ್, ಕೊಡಗು.
38. ಶಾಂತಿ ವರ್ಧಕ ವಿದ್ಯಾಸಂಸ್ಥೆ ಬಾಲ್ಕಿ.
39. ಪ್ರಧಾನರು, ಮಂಡಲ ಪಂಚಾಯ್ತಿ, ಹಮ್ಮಿನಕಟ್ಟಿ, ರಾಣೆಬೆನ್ನೂರು.

ಡಾ. ಜಿ. ಪರಮೇಶ್ವರ್ : ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯದಲ್ಲಿ ಈಗಾಗಲೇ ಸುಮಾರು 2 ಲಕ್ಷ 20 ಸಾವಿರ ಮಹಿಳಾ ಉದ್ಯೋಗಿಗಳಿದ್ದಾರೆ. ಇದರಲ್ಲಿ 8050 ಜನ ಮಹಿಳೆಯರು ವರ್ಕಿಂಗ್ ವಿಮೆನ್ಸ್ ಹಾಸ್ಟೆಲ್ ಫೆಸಿಲಿಟೀಸ್ ಬೇಕು ಎಂದು, ರಿಕ್ವೈರ್‌ಮೆಂಟ್ ಇದೆ ಎಂದು ಕೇಂದ್ರ ಸರ್ಕಾರದವರು ತೀರ್ಮಾನವನ್ನು ತೆಗೆದುಕೊಂಡಿದ್ದಾರೆ. ಅಲ್ಲಿ ಇನ್ನೂ ಐದು ಸಾವಿರ ಜನರಿಗೆ ಹಾಸ್ಟೆಲ್ ಫೆಸಿಲಿಟೀಸ್ ಬೇಕು ಎಂದು ಅವರು ತೀರ್ಮಾನ ತೆಗೆದುಕೊಂಡಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ಏನು ಆಗಿದೆ ಅಂದರೆ 1990-91ಕ್ಕೆ ಕೇಂದ್ರ ಸರ್ಕಾರ ಆರು ಕೋಟಿ ರೂಪಾಯಿಗಳನ್ನು ಇದಕ್ಕಾಗಿಯೇ ಇಟ್ಟಿದ್ದಾರೆ. ಹೀಗಿದ್ದರೂ ಸಹ ಅನೇಕ ಅರ್ಜಿಗಳು ಬಂದರೂ ಸಹ ಇದುವರೆಗೆ ಸರ್ಕಾರ ಕೇಂದ್ರ ಸರ್ಕಾರಕ್ಕೆ ಯಾವುದೇ ಅರ್ಜಿಗಳನ್ನು ಶಿಫಾರಸ್ಸು ಮಾಡಿ ಕಳಿಸಿಲ್ಲ. ಮಂತ್ರಿಗಳು ಹೇಳುತ್ತಾರೆ ನಾಲ್ಕು ಸಂಸ್ಥೆಗಳಿಗೆ ಸಂಬಂಧಪಟ್ಟಂತೆ ಕೇಂದ್ರದವರು

ಕೇಳಿದ್ದಾರೆ, ಕಳಿಸಿಕೊಡುತ್ತೇವೆ ಎಂದು. ಬೇರೆಯವರಿಗೆ ಈ ಅನುಕೂಲ ಒದಗಿಸುವ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ?

ಶ್ರೀ ಬಿ. ಶಿವಣ್ಣ : ವರ್ಕಿಂಗ್ ವುಮೆನ್ಸ್ ಹಾಸ್ಟೆಲ್ ಬಗ್ಗೆ 39 ಅಪ್ಲಿಕೇಶನ್ಸ್ ನಮ್ಮ ಹತ್ತಿರ ಇವೆ. ಇದನ್ನು ಗವರ್ನಮೆಂಟ್ ಆಫ್ ಇಂಡಿಯಾಗೆ ನಾರು ರೆಕ್ಕೊಂಡ್ ಮಾಡಿ ಕಳಿಸಬೇಕಾಗುತ್ತದೆ. ಗವರ್ನಮೆಂಟ್ ಆಫ್ ಇಂಡಿಯಾಗೆ ರೆಕ್ಕೊಂಡ್ ಮಾಡುವ ಕಾಲಕ್ಕೆ ಕೆಲವು ಪೇಪರ್ಸ್‌ಗಳನ್ನು, ಡಾಕ್ಯುಮೆಂಟ್ಸ್‌ನ್ನು ಅವರು ಇನ್‌ಸಿಸ್ಟ್ ಮಾಡುತ್ತಾರೆ. ಡಾಕ್ಯುಮೆಂಟ್ಸ್‌ನ್ನು ವಾಲಂಟರಿ ಆರ್ಗನೈಸೇಷನ್, ಯಾರು ವರ್ಕಿಂಗ್ ವಿಮೆನ್ಸ್ ಹಾಸ್ಟೆಲ್ ನಡೆಸಿಕೊಂಡು ಬರುತ್ತೇವೆಂದು ಹೇಳುತ್ತಾರೋ, ಅವರು ಕೊಟ್ಟಿಲ್ಲ ಎಂದರೆ ನಮಗೆ ಕಷ್ಟ ಆಗುತ್ತದೆ. ಅಂತಹ ಪೇಪರ್ಸ್‌ಗಳು, ಡಾಕ್ಯುಮೆಂಟ್‌ಗಳು ನಮ್ಮ ಹತ್ತಿರ ತೀವ್ರವಾಗಿ ಬಂದರೆ ನಾನು ಗವರ್ನಮೆಂಟ್ ಆಫ್ ಇಂಡಿಯಾಗೆ ಶಿಫಾರಸ್ ಮಾಡಿ ಬರೆಯುತ್ತೇವೆ. ನಂತರ ಹೊಸ ಹಾಸ್ಟೆಲ್ ತೆರೆಯುವುದರಲ್ಲಿ ಯಾವ ತೊಂದರೆಯೂ ಆಗುವುದಿಲ್ಲ.

ಡಾ. ಜಿ. ಪರಮೇಶ್ವರ್ : ಇವರ ಉತ್ತರದ ಪ್ರಕಾರ 1,26,33,106.00 ರೂಪಾಯಿಗಳನ್ನು ಈಗಾಗಲೇ ಕೇಂದ್ರದಿಂದ ಬಿಡುಗಡೆ ಮಾಡಲಾಗಿದೆ ಎಂದು ಹೇಳುತ್ತಿದ್ದಾರೆ. ಆದರೆ 1990-91ನೇ ವರ್ಷಕ್ಕೆ ಮಾತ್ರವೇ 6 ಕೋಟಿ ರೂಪಾಯಿಗಳನ್ನು ಕೇಂದ್ರ ಸರ್ಕಾರದಲ್ಲಿ ಇಟ್ಟಿದ್ದಾರೆ.

10-10 ಎ.ಎಂ

ಈಗ 14 ಹಾಸ್ಟೆಲ್‌ಗಳನ್ನು ಕೊಟ್ಟಿದ್ದೇವೆ, ಅದರಲ್ಲಿ 1 ಕೋಟಿ 26 ಲಕ್ಷ ಎಂದು ಹೇಳುತ್ತಿದ್ದಾರೆ. ಆದರೆ ಈಗ ಒಂದೇ ವರ್ಷಕ್ಕೆ 6 ಕೋಟಿಯನ್ನು ಇದಕ್ಕಾಗಿ ಕೇಂದ್ರ ಸರ್ಕಾರ ಇಟ್ಟಿದೆ. ಹೀಗಿದ್ದರೂ ಕೂಡ ಕೇಂದ್ರಸರ್ಕಾರದಿಂದ ಬರುವ ಹಣವನ್ನು ನಾವು ಸರಿಯಾಗಿ ಉಪಯೋಗ ಮಾಡುತ್ತಿಲ್ಲ, ರಾಜ್ಯಪಾಲರ ಭಾಷಣದಲ್ಲಿ 30 ಪರ್ಸೆಂಟ್ ರಿಸರ್ವೇಷನನ್ನು ನೌಕರಿಯಲ್ಲಿ ಹೆಣ್ಣುಮಕ್ಕಳಿಗೆಂದು ಮಾಡುತ್ತೇವೆಂದು ಹೇಳಿಕೊಂಡಿದ್ದಾರೆ. ಆದರೆ ಇಂತಹ ಅವಕಾಶ ಕೇಂದ್ರಸರ್ಕಾರದಿಂದ ನಮಗೆ ಬಂದರೂ ಕೂಡ ಸರ್ಕಾರ ಈ ಸವಲತ್ತುಗಳನ್ನು ಒದಗಿಸಲು ಆಗುತ್ತಿಲ್ಲವೆಂದು ಹೇಳುತ್ತಿದ್ದಾರೆ. ಈಗ ತುಮಕೂರಿನಲ್ಲಿ ಮೂರು ಅಪ್ಲಿಕೇಷನ್ಸ್ ಬಂದಿದೆ. 87ರಿಂದ ಒಂದು ಪೆಂಡಿಂಗಿದೆ. ಅದರ ಬಗ್ಗೆ ಯಾವ ಕ್ರಮವನ್ನೂ ತೆಗೆದುಕೊಂಡು ನಮ್ಮ ಸರ್ಕಾರ ಕೇಂದ್ರಕ್ಕೆ ಕಳಿಸಿಕೊಟ್ಟಿಲ್ಲ ನಾನು ವೈಯಕ್ತಿಕವಾಗಿ ಸಿದ್ಧಾರ್ಥ ಎಜುಕೇಷನ್ ಸೊಸೈಟಿ ಅಪ್ಲಿಕೇಷನನ್ನು ಮೂರ್ನಾಲ್ಕು ಬಾರಿ ಕೇಳಿದರೂ ಕೂಡ, ಎಲ್ಲ ಎನ್‌ಕ್ಲೋಸರ್ ಕೊಟ್ಟಿದ್ದರೂ ಸಹ ಕಳಿಸಲಿಲ್ಲ. ಇದು ವಿಳಂಬಕ್ಕೆ ಕಾರಣವೇನು ಮತ್ತು ಅದನ್ನು ಯಾವಾಗ ಕಳಿಸುತ್ತೀರೆಂದು ಸಚಿವರು ಉತ್ತರಿಸಬೇಕು.

ಶ್ರೀ ಬಿ. ಶಿವಣ್ಣ (ಸಮಾಜಕಲ್ಯಾಣ ಸಚಿವರು) : ಸ್ಟೇಟ್ ಗವರ್ನಮೆಂಟ್ ರೆಕಮೆಂಡ್ ಮಾಡಬೇಕಾದರೆ ಕೆಲವು ಡಾಕ್ಯುಮೆಂಟ್ಸನ್ನು ಕೊಡಬೇಕಾಗುತ್ತದೆ, ಆ ಸಂಸ್ಥೆಯವರು ಅವನ್ನೆಲ್ಲ ಇಂದೇಕೊಟ್ಟರೆ ನಾಳೆಯೇ ಕಳಿಸಿ ಕೊಡುತ್ತೇವೆ.

ಡಾ. ಜಿ. ಪರಮೇಶ್ವರ್ : ಎಲ್ಲ ಒದಗಿಸಿಕೊಟ್ಟಿದ್ದೇನೆ, ಆದರೂ 1987ರಿಂದ ವಿಳಂಬವಾದದ್ದು ಏಕೆ? ಇದಕ್ಕಾರು ಕಾರಣರು? ಕೇಂದ್ರದಿಂದ ಬರುವ ಹಣ ಬಳಸಿಕೊಳ್ಳಲು ವಾಲೆಂಟರಿ ಸಂಸ್ಥೆಗಳು ಮುಂದೆ ಬರಬೇಕು ಎಂದು ಒಂದು ಕಡೆ ಹೇಳುವುದು ಇನ್ನೊಂದು ಕಡೆ ಅವರಿಗೆ ಎನ್‌ಕರೇಜ್ ಮಾಡುವುದಿಲ್ಲವೆಂದರೆ ಯಾರೂ ಸಹ ಇದಕ್ಕಾಗಿ ಮುಂದೆ ಬರುವುದಿಲ್ಲ.

ಶ್ರೀ ಬಿ. ಶಿವಣ್ಣ : ಅವರ ಕೇಸನ್ನು ರೆಕಮೆಂಡ್ ಮಾಡುತ್ತೇವೆ.

ಡಾ. ಜಿ. ಪರಮೇಶ್ವರ್ : ವಿಳಂಬವಾದದ್ದು ಏಕೆ?

ಶ್ರೀ ಬಿ. ಶಿವಣ್ಣ : ಈ ವ್ಯವಹಾರ ಅಷ್ಟು ಸುಲಭವಾಗಿ ಆಗುವುದಿಲ್ಲ. ಆದರೂ ನಾಳೆಯೇ ಅವರು ಹೇಳುವ ಅರ್ಜಿಯನ್ನು ಕೇಂದ್ರಕ್ಕೆ ಕಳಿಸಲು ಪ್ರಯತ್ನಿಸುತ್ತೇನೆ.

ಡಾ. ಜಿ. ಪರಮೇಶ್ವರ್ : 87ರಿಂದಲೂ ವಿಳಂಬವಾದದ್ದು ಏಕೆ ಎಂದು ಹೇಳುತ್ತಿಲ್ಲ?

ಶ್ರೀ ಎಲ್. ಆರ್. ಶಿವರಾಮೇಗೌಡ : ದಯವಿಟ್ಟು ಸರಿಯಾಗಿ ಉತ್ತರ ಕೊಡಿ. ಇಷ್ಟೊಂದು ವಿಳಂಬ ಆಗಲು ಕಾರಣವೇನು?

ಅಧ್ಯಕ್ಷರು : ಮಾನ್ಯ ಮಂತ್ರಿಗಳು ತಮ್ಮ ಇಂಗಿತವನ್ನು ಅರಿತುಕೊಂಡಿದ್ದಾರೆ. ವಿಳಂಬ ಆಗಿದೆ. ಇನ್ನು ಮುಂದೆ ಹಾಗಾಗದಂತೆ ನೋಡಿಕೊಳ್ಳುತ್ತಾರೆ.

ಶ್ರೀ ಬಿ. ಶಿವಣ್ಣ: ಕೇಂದ್ರದಿಂದ 12-11-90ಕ್ಕೆ ಒಂದು ಪತ್ರ ಬಂದಿದೆ. ಅದರ ಪ್ರಕಾರ.....

ಡಾ. ಜಿ. ಪರಮೇಶ್ವರ್ : ವಿಳಂಬವಾಗಿದೆ, ಕಾಗದ ಪತ್ರಗಳನ್ನು ಕಳಿಸಿಕೊಡಿ ಎಂದು ಕೇಂದ್ರ ಸರ್ಕಾರದ ಪತ್ರ ಬರೆದಿದೆ. 6 ಕೋಟಿ ರೂ.ಗಳನ್ನು ಬಳಸಿಕೊಂಡಿಲ್ಲ. ಈ ಬಗ್ಗೆ ಅಡ್ವಾನ್ಸ್ ಕಾಪಿ ಕಳಿಸಿಕೊಡಿ ಎಂದು ಪತ್ರ ಬರಿದಿದ್ದಾರೆ. ಆದರೂ ಕಳಿಸಿಲ್ಲ.

ಅಧ್ಯಕ್ಷರು : ಸ್ಪೆಷಲ್ ಮೆಸೆಂಜರ್ ಮೂಲಕ ಇವತ್ತೇ ಕಳಿಸಿಕೊಡಿ ಸಚಿವರೇ.

ಶ್ರೀ ಬಿ. ಶಿವಣ್ಣ : ಆಯಿತು, ಖಂಡಿತವಾಗಿ.

ರಾಜ್ಯದಲ್ಲಿ ಕೋಮು ಗಲಭೆಯಿಂದಾದ ನಷ್ಟ

853 - ಶ್ರೀ ಆರ್.ಎನ್. ನಾಯ್ಕ (ಭಟ್ಕಳ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಕಳೆದ ಸಾಲಿನಲ್ಲಿ ಕೋಮು ಗಲಭೆ ಸಂಭವಿಸಿದಾಗ ಒಟ್ಟಿಗೆ ಎಷ್ಟು ಸಾವು ಸಂಭವಿಸಿದೆ (ಜಿಲ್ಲಾವಾರು ಮಾಹಿತಿ ನೀಡುವುದು)?

ಆ) ಗಲಭೆ ಪ್ರಯುಕ್ತ ಎಷ್ಟು ಮೊತ್ತದ ಸಾರ್ವಜನಿಕ ಆಸ್ತಿಪಾಸ್ತಿ ಹಾನಿಯಾಗಿದೆ (ವಿವರ ನೀಡುವುದು)?

ಇ) ಮರಣ ಪಟ್ಟ ಕುಟುಂಬಕ್ಕೆ ಈ ತನಕ ಎಷ್ಟು ಪರಿಹಾರ ನೀಡಲಾಗಿದೆ ಹಾಗೂ ಒಟ್ಟಿಗೆ ಎಷ್ಟು ಕುಟುಂಬಗಳಿಗೆ ಪರಿಹಾರ ದೊರಕಿದೆ?

ಶ್ರೀ ಧರ್ಮಸಿಂಗ್ (ಗೃಹ ಸಚಿವರು):

ಅ) 74 ಜನರು ಮೃತಪಟ್ಟಿದ್ದು, ಜಿಲ್ಲಾವಾರು ಸಂಖ್ಯೆಯು ಈ ಕೆಳಗಿನಂತಿದೆ.

ಕ್ರ. ಸಂ.	*ಜಿಲ್ಲೆಯ ಹೆಸರು*	*ಮೃತಪಟ್ಟವರ ಸಂಖ್ಯೆ*
1.	ಬೆಂಗಳೂರು	26
2.	ಚಿತ್ರದುರ್ಗ	17
3.	ಕೋಲಾರ	10
4.	ಹಾಸನ	8
5.	ತುಮಕೂರು	4
6.	ಕೊಡಗು	3